# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1377 (1535)

ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 21-03-2025

ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಾದಾರ ಚೆನ್ನಯ್ಯ 12ನೇ ಶತಮಾನದ ಶಿವಶರಣರು ಹಾಗೂ ವಚನಕಾರರು, ಚಮ್ಮಾರ ಕೆಲಸ ಮಾಡುತ್ತಿದ್ದ ಇವರು ಶಿವಶರಣರಿಗೆ ಚಪ್ಪಲಿ ಮಾಡುವ ಕಾಯಕ ಮಾಡುತ್ತಿದ್ದ ಇತಿಹಾಸವಿರುವುದು ನಿಜವೇ; | 12ನೇ ಶತಮಾನದ ಶಿವಶರಣರ ಕುರಿತು ವಚನಗಳ ಅಧ್ಯಯನ ಮತ್ತು ಸಂಶೋಧನೆ ಮುಖಾಂತರ ಸಂಗ್ರಹವಾದ ದಾಖಲೆಗಳಲ್ಲಿ ಉಲ್ಲೇಖವಾಗಿರುವಂತೆ ಶಿವಶರಣ ಮಾದಾರ ಚೆನ್ನಯ್ಯನವರು ಪಾದರಕ್ಷೆಗಳನ್ನು ಮಾಡುವ ಕಾಯಕ ಶರಣರಾಗಿದ್ದರೆಂದು ತಿಳಿದು ಬರುತ್ತದೆ. |
| ಆ) | ಇವರು ಶಿವನ ಮಹಾನ್ ಭಕ್ತರಾಗಿದ್ದರು ಈ ಮಹಾನ್ ಶರಣರ ಪ್ರತಿಮೆಯನ್ನು ಕಲಬುರ್ಗಿಯಲ್ಲಿ ಬಾಬು ಜಗಜೀವನರಾಂರವರ ಪ್ರತಿಮೆಯ ಪಕ್ಕದಲ್ಲಿ ಸ್ಥಾಪಿಸಿ ಮುಂಬರುವ ಅವರ ಜಯಂತಿಗೆ ವಿಶೇಷ ಕೊಡುಗೆ ನೀಡಲು ಸರ್ಕಾರ ಮುಂದಾಗುವುದೇ? | ಶಿವಶರಣ ಮಾದಾರ ಚೆನ್ನಯ್ಯನವರ ಪ್ರತಿಮೆಯನ್ನು ಕಲಬುರ್ಗಿಯಲ್ಲಿ ಬಾಬು ಜಗಜೀವನರಾಂ ರವರ ಪ್ರತಿಮೆಯ ಪಕ್ಕದಲ್ಲಿ ಸ್ಥಾಪನೆ ಕುರಿತಂತೆ,<br><br>ಸರ್ಕಾರದ ಸುತ್ತೋಲೆ ಸಂಖ್ಯೆ ಕಸಂವಾಪ್ರ 564 ಕಸಧ 2012 ದಿ:11.06.2012ರಲ್ಲಿ ಸರ್ಕಾರದ/ ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ/ಶರಣರ, ಜನ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಯನ್ನು ಸ್ಥಾಪಿಸುವುದನ್ನು ನಿರ್ಬಂಧಿಸಲಾಗಿದೆ.<br><br>ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾದ SLP(C) ಸಂಖ್ಯೆ 8519/2006ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:18-01-2013ರಂದು ನೀಡಿರುವ ತೀರ್ಪಿನಲ್ಲಿರುವ ಒಂದು ಅಂಶವು ಈ ಕೆಳಕಂಡಂತೆ ಇರುತ್ತದೆ.<br><br>" ........ State Government shall not grant any permission for installation of any statue or construction of any structure in public roads, pavements, sideways and other public utility places".<br><br>"......... ರಾಜ್ಯ ಸರ್ಕಾರವು ಸಾರ್ವಜನಿಕ ರಸ್ತೆ, ರಸ್ತೆ ಬದಿಯ ಸ್ಥಳಗಳು ಹಾಗೂ ಸಾರ್ವಜನಿಕ ಉಪಯುಕ್ತ ಸ್ಥಳಗಳಲ್ಲಿ ಯಾವುದೇ ಪ್ರತಿಮೆ ಅಥವಾ ರಚನಾ ವಿನ್ಯಾಸದ ನಿರ್ಮಾಣ ಗಳನ್ನು ಸ್ಥಾಪಿಸಲು ಯಾವುದೇ ಅನುಮತಿಯನ್ನು ನೀಡತಕ್ಕದ್ದಲ್ಲ" ಎಂದಿರುತ್ತದೆ. |

| | | |
|---|---|---|
| | | ಶಿವಶರಣ ಮಾದಾರ ಚೆನ್ನಯ್ಯನವರ ಪ್ರತಿಮೆಯನ್ನು ಕಲಬುರ್ಗಿಯಲ್ಲಿ ಸ್ಥಾಪಿಸುವ ಕುರಿತು, ಸರ್ಕಾರದ ಸುತ್ತೋಲೆ ಸಂಖ್ಯೆ: ಕಸಂವಾಪ್ರ 564 ಕಸಧ 2012, ದಿನಾಂಕ:11.06.2012ರನ್ವಯ ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಕಸಂವಾ 49 ಕವಿಸ 2025.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.